**ಓ. ಎಸ್ . 250/2018**

**ಪಿ.ಡಬ್ಲ್ಯೂ- 1**

**(ದಿನಾಂಕಃ 21-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

ಮುಂದುವರೆದ ಪಾಟಿ ಸವಾಲು ಃ ಶ್ರೀ ಎ ಎಮ್ ವಿ ಪ್ರತಿವಾದಿ ಪರ ವಕೀಲರಿಂದ -

ವಿಪಿಸಿ ನಂ. 1162 ಮತ್ತು 1163 ಇವು ಪ್ರತಿವಾದಿಯವರ ಆಸ್ತಿಗಳು. ಪ್ರತಿವಾದಿಯವರ ಮನೆಗಳು ಪೂರ್ವಕ್ಕೆ ಮುಖವಾಗಿರುತ್ತವೆ ಎಂದರೆ ಸರಿ . ಪ್ರತಿವಾದಿಯವರ ಮನೆಗಳು 2 ಅಂತಸ್ತಿನದ್ದಾಗಿರುತ್ತವೆ ಎಂದರೆ ಸರಿ . ಸದರಿ ಮನೆಗಳನ್ನು ಕಟ್ಟಿ ಸುಮಾರು 125

ವರ್ಷಗಳಾಗಿರುತ್ತವೆ ಎಂದರೆ ಸರಿ . ಈ ಆಸ್ತಿಗಳು ಪ್ರತಿವಾದಿಯವರಿಗೆ ಹೇಗೆ ಬಂದಿರುತ್ತವೆ ಎಂದು ನನಗೆ ಮಾಹಿತಿ ಇಲ್ಲ. ಹಮೀದಸಾಬ ಪರೀದಸಾಬ ಪ್ರತಿವಾದಿಯವರಿಗೆ ಅಜ್ಜನಾಗಬೇಕು. ವಿಪಿಸಿ ನಂಬರ 1162 ಮತ್ತು 1163 ನ್ನು ಎರಡು ಖರೀದಿ ಪತ್ರದ ಮೂಲಕ ಪ್ರತಿವಾದಿಯವರ ಅಜ್ಜ ಖರೀದಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿ . ದಿಃ 06-05-1902 ಹಾಗೂ 14-05-1902 ದಿನಾಂಕಗಳಂದು ಖರೀದಿ ಪತ್ರದ ಮೂಲಕ ತೆಗೆದುಕೊಂಡಿರುತ್ತಾರೆ ಎಂದರೆ ಸರಿ . ಖರೀದಿ ತೆಗೆದುಕೊಂಡಾಗಿನಿಂದ ಪ್ರತಿವಾದಿಯವರ ಅಜ್ಜ ಮತ್ತು ಅವರ ತಂದೆ ಹಾಗೂ ಅವರು ಕಬ್ಜಾ ವಹಿವಾಟು ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ .

ಪ್ರತಿವಾದಿಯವರ ಅಜ್ಜನಿಗೆ ಮೂರು ಜನ ಗಂಡುಮಕ್ಕಳಿದ್ದು ಅಬ್ದುಲ ಅಜೀಜ, ಅಬ್ದುಲ ರಜಾಕ ಮತ್ತು ಮಹ್ಮದ ಹುಸೇನ ಎಂದರೆ ಸರಿ . ಅವರ ಅಜ್ಜ ತೀರಿಕೊಂಡ ನಂತರ ಈ ಮೂರು ಜನ ಮಕ್ಕಳ ಹೆಸರುಗಳು ಉತಾರದಲ್ಲಿ ನಮೂದಾಗಿವೆ ಎಂದರೆ ಸರಿ . ದಿಃ19-07-1948 ರಲ್ಲಿ ಈ ಮೂರು ಜನ ಮಕ್ಕಳು ವಿಪಿಸಿ ನಂಬರ 1162 ಮತ್ತು 1163 ಗಳನ್ನು ವಾಟನಿ ಮಾಡಿಕೊಂಡಿರುತ್ತಾರೆಂದರೆ ಸರಿ . 1 ಮತ್ತು 2 ನೇ ಪ್ರತಿವಾದಿಯವರಿಗೆ ಮೇಲಿನ ಆಸ್ತಿಗಳಲ್ಲಿ ಉತ್ತರ ಭಾಗದ ಹಿಸ್ಸೆ ಬಂದಿದೆ ಎಂದರೆ ಸರಿ . ಮಹ್ಮದಹುಸೇನ ನಮಗೆ ಮಾವನಾಗಬೇಕು. ವಾದಿ ನಂ.3 ನನಗೆ ಸೊಸೆಯಾಗಬೇಕು.

ವಿಪಿಸಿ ನಂಬರ 1162 ಮತ್ತು 1163 ರ ದಕ್ಷಿಣ ಭಾಗದ ಹಿಸ್ಸೆ ಅವರ ಅಣ್ಣ ತಮ್ಮಂದಿರಿಗೆ ಹೋಗಿರುತ್ತದೆ. ವಿಪಿಸಿ ನಂಬರ 1162 ಮತ್ತು 1163 ರ ಉತ್ತರಕ್ಕೆ ಪೂರ್ವಪಶ್ಚಿಮವಾಗಿ ಸಂದು ಜಾಗ ಇರುತ್ತದೆ ಎಂದರೆ ಸರಿ . ಸಂದು ಜಾಗ ಸುಮಾರು 50 ಫೂಟ ಪೂರ್ವಪಶ್ಚಿಮವಾಗಿ ಇರುತ್ತದೆ ಎಂದರೆ ಸರಿಯಲ್ಲ. ಅದು 40 ಫೂಟ ಇರುತ್ತದೆ. ಉತ್ತರ-ದಕ್ಷಿಣ ಸುಮಾರು 5-6 ಫೂಟ ಇರುತ್ತದೆ ಎಂದರೆ ಸರಿ .

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ